ಸಿ.ಸಿ. ನಂಬರಃ 292/2020

ಪಿ. ಡಬ್ಲ್ಯೂಃ 1

( ದಿನಾಂಕಃ 01-04-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಆರ್.ಎನ್ ವಕೀಲರಿಂದ

ಈ ಪ್ರಕರಣಕ್ಕೆ ಸಂಬಂಧಿದ ದಾಖಲಾತಿಗಳು ನನ್ನ ಬಳಿ ಇರುತ್ತವೆ. ಫಿರ್ಯಾದಿ ಪ್ರತಿ ನನ್ನ ಬಳಿ ಇದೆ ಎಂದರೆ ಸರಿ. ದಿಃ06-08-2018 ರಂದು ವಿಭಾಗೀಯ ಕಚೇರಿಗೆ ಆರೋಪಿಗೆ ಸಂಬಂಧಿಸಿದಂತೆ ವರದಿ ನಾನೇ ಕಳುಹಿಸಿದ್ದೇನೆ. ಸದರಿ ವರದಿ ಮೇಲಿಂದ ಇಲಾಖಾ ವಿಚಾರಣೆ ಆದ ಬಗ್ಗೆ ಮಾಹಿತಿ ಇಲ್ಲ. ನಾನು ಕಳುಹಿಸಿದ ವರದಿ ಮೇಲಿಂದ ಇಲಾಖಾ ವಿಚಾರಣೆಯಾದ ಬಗ್ಗೆ ತಿಳಿದುಕೊಂಡಿಲ್ಲ. ವಿಭಾಗೀಯ ನಿಯಂತ್ರನಾಧಿಕಾರಿ ಮಾಡಿದ ಆದೇಶದ ಪ್ರತಿಯನ್ನು ಫಿರ್ಯದಿ ಜೊತೆಗೆ ನೀಡಿದ್ದೀರಾ ಎಂದರೆ ನೆನಪಿಲ್ಲ. ದಿಃ10-08-2018 ರಂದು ಸದರಿ ಆದೇಶವಾಗಿದೆ. ಸದರಿ ಆದೇಶದಲ್ಲಿ ಕರ್ತವ್ಯ ತಡೆ ಕುರಿತು ಆದೇಶವಾಗಿತ್ತು. ಸದರಿ ಆದೇಶ ಯಲ್ಲಿಯವರೆಗೆ ಇತ್ತು ಎಂದು ನಾನು ಗಮನಿಸಿಲ್ಲ. ಆ ಸಮಯದಲ್ಲಿ ನಾನು ಡಿಪೋ ಮ್ಯಾನೇಜರ್ ಎಂದು ಕೆಲಸ ಮಾಡುತ್ತಿದ್ದೆ. ಸದರಿ ಆದೇಶದ ಪ್ರತಿ ನಾನು ಹೊಂದಿದ ಪದಿಯ ವಿಳಾಸಕ್ಕೆ ಬರುತ್ತದೆ. ಘಟನೆ ನಡೆದಾಗ ವೈಧ್ಯ ಅನ್ನುವವರು ಸುಪ್ರವೈಜರ್ ಇದ್ದು, ಮುಖ್ಯಾಧಿಕಾರಿ ಎಂದು ಹುದ್ದೆ ಇಲ್ಲ. ಸದರಿ ಸುಪ್ರವೈಜರ್ ಡಿಪೋ ಮಟ್ಟಿಗೆ ಮುಖ್ಯಸ್ಥರಾಗಿರುತ್ತಾರೆ. ಸಂಬಂಧಪಟ್ಟ ವ್ಯಕ್ತಿಗಳಿಗೆ ಆದೇಶದ ಪ್ರತಿಯನ್ನು ಸುಪ್ರವೈಜರ್ ಅಥವಾ ಕೇಸ್ ವರ್ಕರ ಮುಟ್ಟಿಸಬಹುದು. ಆದೇಶ ಪ್ರತಿಯ ಮೇಲೆ ಕೇಸ್ ವರ್ಕರನ ಸಹಿ ಇರುತ್ತದೆ. ಕರ್ತವ್ಯ ತಡೆ ಆದೇಶ ಆ ಸಮಯದಲ್ಲಿ ಆರೋಪಿತನ ವಿರುದ್ಧ ಇರಲಿಲ್ಲ ಎಂದರೆ ಸರಿಯಲ್ಲ.

ಕರ್ತವ್ಯ ತಡೆ ಆದೇಶ ಹಾಗೂ ಕಾರಣ ಕೇಳಿ ನೀಡುವ ನೋಟೀಸು ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಸದರಿ ಆದೇಶದ ಮೇಲೆ ಕಾರಣ ಕೇಳುವ ನೋಟೀಸು

ನೀಡುತ್ತಾರೆ ತಡೆ ನೀಡುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೋಟೀಸಿನ ಮೇಲೆ ಅಂತಹ ವ್ಯಕ್ತಿ ಇಲಾಖಾ ವಿಚಾರಣೆಗೆ ಹಾಜರಾಗಬೇಕಾಗುತ್ತದೆ ಎಂದರೆ ಸರಿ. ಈಗ ನೋಡುತ್ತಿರುವ ನಿಪಿ-2 ಕಾರಣ ಕೇಳುವ ನೋಟೀಸು ಇರುತ್ತದೆ. ನಿಪಿ-2 ರಲ್ಲಿ ದಿನಾಂಕದಲ್ಲಿ ಕೈಬರಹ ಇದೆ ಎಂದರೆ ಸರಿ. ನಿಪಿ-2 ರ ಮೇಲೆ ಆರೋಪಿತನ ಸಹಿ ಎಂದು ಗುರುತಿಸಿದ ಸ್ಥಳದಲ್ಲಿ ಆರ್ ಎ ಜೆ ಎಂದು ಸಹಿ ಮಾಡಲಾಗಿದೆ. ನಿಪಿ-1 ರಲ್ಲಿ ಆರೋಪಿತ ಸಹಿ ಎಂದು ತೋರಿಸಿದ ಸ್ಥಳದಲ್ಲಿ ಆರ್ ಎಂದು ಮಾತ್ರ ಇದೆ ಎಂದರೆ ಸಾಕ್ಷಿ ಅದು ರಿಸೀವಡ್ ಎಂದ ಅರ್ಥ ಎಂದು ತಿಳಿಸಿರುತ್ತಾರೆ. ಸದರಿ ಭಾಗವನ್ನು ನ್ಯಾಯಾಲಯದ ಗುರುತಿಗಾಗಿ ನಿಪಿ-1ಎ ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ತೋರಿಸಿದ ಲಗತ್ತುಗಳು ನ್ಯಾಯಾಲಯದ ಮುಂದಿಲ್ಲ ಎಂದರೆ ಸರಿ. ಸದರಿ ದಾಖಲಾತಿಗಳ ಮೂಲ ಪ್ರತಿಗಳು ನಮ್ಮ ಸುಪರ್ದಿಯಲ್ಲಿರುತ್ತವೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಮ್ಮಿಂದ ಪಡೆದುಕೊಳ್ಳಬೇಕು ಎಂದರೆ ಸರಿ. ಸದರಿ ಲಗತ್ತುಗಳನ್ನು ತನಿಖಾಧಿಕಾರಿ ಪಡೆದ ಬಗ್ಗೆ ನನಗೆ ನೆನಪಿಲ್ಲ. ನಮ್ಮ ಬಳಿ ಇರುವ ಕಡತಗಳ ಪ್ರತಿಗಳನ್ನು ಅವಶ್ಯಕತೆ ಮೇರೆಗೆ ಪೂರೈಸುತ್ತೇವೆ. ಸದರಿ ಪ್ರತಿಗಳ ಮೇಲೆ ನಮ್ಮ ಸಹಿ ಇರುತ್ತದೆ. ನಿಪಿ-1 ರಲ್ಲಿ ನಮೂದಿಸಿದ ಲಗತ್ತುಗಳ ಪ್ರತಿಗಳನ್ನು ನೀಡಿದ ಬಗ್ಗೆ ನೆನಪಿಲ್ಲ. ಪ್ರಕರಣದಲ್ಲಿ ಸಾಕ್ಷಿ ನುಡಿಯುವ ಪೂರ್ವದಲ್ಲಿ ಕಡತ ಪರಿಶೀಲಿಸಿದ್ದೇನೆ. ಕಡತವನ್ನು ಪರಿಶೀಲಿಸಿದಾಗ ಯಾವ ಯಾವ ದಾಖಲೆಗಳ ಕುರಿತು ಪ್ರತಿ ನೀಡಲಾಗಿದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ಲಗತ್ತುಗಳು ಎಂದು ತಿಳಿಸಿದ ದಾಖಲೆಗಳನ್ನು ಸೃಷ್ಟಿಮಾಡಿದ್ದರಿಂದ ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ವರದಿ ಕೋಪದಿಂದ ಹಾಗೂ ಆರೋಪಿಯನ್ನು ಪ್ರಕರಣದಲ್ಲಿ ಸಿಕ್ಕಿಸಬೇಕೆಂಬ ಕಾರಣದಿಂದ ಸೃಷ್ಟಿಸಿದ್ದರಿಂದ ಸದರಿ ವರದಿಗೆ ಪೂರಕವಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮೊಗಟಾದ ಶಿವಕುಮಾರ ನಮ್ಮ ಡಿಪೋದಲ್ಲಿ ಚಾಲಕನೆಂದು ಕೆಲಸ ಮಾಡುತ್ತಿದ್ದ ಎಂದರೆ ಸರಿ. ಆತನ ಮೇಲೂ ಸಹ ಇಲಾಖಾ ಪ್ರಕರಣವಾಗಿದೆ ಎಂದು ನೆನಪಿಲ್ಲ. ಸದರಿ ಶಿವಕುಮಾರನ ವಿರುದ್ಧ ಇಲಾಖಾ ವಿಚಾರಣೆಯ ಸಮಯದಲ್ಲಿ ನನ್ನನ್ನು ಡಿಪೋದಿಂದ ಕಳುಹಿಸಬೇಕೆಂದು ನೌಕರರು ಮುಷ್ಕರ ಹೂಡಿದಾಗ, ನನ್ನ ಪರ ಆರೋಪಿ ಸಹಿ ಮಾಡುವುದಿಲ್ಲವೆಂದು ಹೇಳಿದ್ದನ್ನು

ದುರುಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಕರ್ತವ್ಯದಿಂದ ತೆಗೆಯಬೇಕೆಂದು ಶಿವಕುಮಾರನ ವಿರುದ್ಧವೂ ಸಹ ನಾನು ಸಂಸ್ಥೆಗೆ ವರದಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಅಂಕೋಲಾ ಜನಪ್ರತಿನಿಧಿಯಿಂದ ನನಗೆ ಫೋನ್ ಕರೆ ಬಂದಿತ್ತು ಎಂದರೆ ಸಾಕ್ಷಿ ಯಾವುದೇ ಮುಷ್ಕರ ಆಗಿಲ್ಲ, ಸಹಿ ಕೇಳಿಲ್ಲ ಮತ್ತು ಫೋನ್ ಕರೆ ಬಂದಿಲ್ಲ ಎಂದು ಹೇಳುತ್ತಾರೆ. ಶಿವಕುಮಾರನ ಪ್ರಕರಣ ಮುಕ್ತಾಯಗೊಳಿಸಲು ಉಮೇಶ ನಾಯಕ ಚಾಲಕನ ಕಡೆಯಿಂದ ಆರೋಪಿಯ ಸಹಿ ಪಡೆದಿದ್ದನ್ನು ಆರೋಪಿ ಬಂದು ನನಗೆ ವಿಚಾರಿಸಿದ್ದರಿಂದ ಸಿಟ್ಟಿನಲ್ಲಿದ್ದೆ ಎಂದರೆ ಸರಿಯಲ್ಲ.

ಆರೋಪಿ ಡಿಪೋ ಸಿಬ್ಬಂದಿಯಾದ ನಳಿನಾ ರವರ ಜೊತೆ ಅನುಚಿತವಾಗಿ ವರ್ತನೆಮಾಡಿದ್ದ ಬಗ್ಗೆ ನಿಪಿ-1 ರಲ್ಲಿ ನಮೂದ್ದು ಅದರ ವರದಿಯನ್ನು ಲಗತ್ತುಗಳಲ್ಲಿ ತೋರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಕುರಿತು ಬೇರೆ ವರದಿ ಇದೆ ಎಂದು ಹೇಳುತ್ತಾರೆ. ಸದರಿ ವರದಿಯಲ್ಲಿ ತಿಳಿಸಿದ ಸಂಗತಿ ಆರೋಪಿತನ ವಿರುದ್ಧ ಸೃಷ್ಟಿಸಿದ ವರದಿ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಕರ್ತವ್ಯ ತಡೆ ಯಾವುದೇ ಆದೇಶವಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಆದೇಶದ ಪ್ರತಿಯನ್ನು ಡಿಪೋ ಸಿಬ್ಬಂದಿಯಾದ ವೀಣಾ ನಾಯ್ಕ ರವರು ಆರೋಪಿಗೆ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ಮುಂಜಾನೆ 8 ರಿಂದ 9 ಗಂಟೆಯವರೆಗೆ ಡಿಪೋದಲ್ಲಿ ಇದ್ದು, ತದನಂತರ 9 ರಿಂದ 10.15 ರವರೆಗೆ ಬಸ್‌ಸ್ಟ್ಯಾಂಡ್ ನಲ್ಲಿ ಇದ್ದು, ನಂತರ ಡಿಪೋಕ್ಕೆ ಹೋಗಿರುತ್ತೇನೆ. ಆ ದಿನ ನಾನು 7 ಗಂಟೆಯವರೆಗೆ ಡಿಪೋನಲ್ಲಿದ್ದೆ. ಘಟನೆ ದಿವಸ ನಾನು ಡಿಪೋಗೆ ಹೋದ ಮತ್ತು ಬಂದ ಸಮಯವನ್ನು ಸೆಕ್ಯುರಿಟಿ ಗೇಟ್ ನಲ್ಲಿ ನಮೂದನೆಯಾಗಿದೆಯಾ ಎಂದರೆ ಸಾಕ್ಷಿ ಅಧಿಕಾರಿಗಳ ಕುರಿತು ಸೆಕ್ಯುರಿಟಿ ಗೇಟ ನಲ್ಲಿ ನಮೂದನೆಯಾಗುವುದಿಲ್ಲ ಎಂದು ಹೇಳುತ್ತಾರೆ. ಅಧಿಕಾರಿಗಳ ಕುರಿತು ಸೆಕ್ಯುರಿಟಿ ಗೇಟ್ ನಲ್ಲಿ ನಮೂದನೆಯ ವಿನಾಯಿತಿ ಇದೆಯಾ ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಡಿಪೋ ಮ್ಯಾನೇರ್ ಹೊರತುಪಡಿಸಿ ಉಳಿದವರ ಚಲನವಲನ ಕುರಿತು ಸೆಕ್ಯುರಿಟಿ ಗೇಟ್ ನಲ್ಲಿ ಎಂಟ್ರಿ ಮಾಡುತ್ತಾರೆ. ಸದರಿ ಡಿಪೋ ಮ್ಯಾನೇಜರ್ ರವರ ಚಲನವಲನ ವಿನಾಯಿತಿ ಕುರಿತು ನನಗೆ ಮಾಹಿತಿ ಇಲ್ಲ. ಆ ದಿನ ಸೆಕ್ಯುರಿಟಿ ವಿಭಾಗದಲ್ಲಿ ಮಾಲಾ ಎಂಬುವರು ಕರ್ತವ್ಯದಲ್ಲಿದ್ದರು. ಸದರಿ ಸೆಕ್ಯುರಿಟಿ ವಿಭಾಗದಲ್ಲಿರುವ ರಜಿಸ್ಟರ್ ಪ್ರತಿಯನ್ನು ತನಿಖಾಧಿಕಾರಿ ಪಡೆದ ಬಗ್ಗೆ ನನ್ನ

ಗಮನಕ್ಕಿಲ್ಲ. ಘಟನೆ ದಿವಸ ಆರೋಪಿ ಡಿಪೋಗೆ ಬಂದ ಬಗ್ಗೆ ಸೆಕ್ಯುರಿಟಿ ವಿಭಾಗದಲ್ಲಿರುವ ರಜೀಸ್ಟರ ನಲ್ಲಿ ವೇಳೆ ಸಹಿತ ನಮೂದನೆ ಇರುತ್ತದೆ ಎಂದರೆ ಸರಿ. ದಿಃ12-08-2018 ರಂದು ಬೆಳಿಗ್ಗೆ ಆರೋಪಿ ಕರ್ತವ್ಯಕ್ಕೆ ಹಾಜರಾಗಲೆಂದು ಡಿಪೋಗೆ ಬಂದಿದ್ದ. ಆರೋಪಿ ಆ ದಿನ ಯಾವ ರೂಟಿನ ಬಸ್ಸಿಗೆ ಹೋಗಲು ಬಂದಿದ್ದ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದನ್ನು ಸಂಚಾರಿ ನಿರೀಕ್ಷಕರು ನಿಗಧಿಪಡಿಸುತ್ತಾರೆ ಎಂದು ಹೇಳುತ್ತಾರೆ. ಸದರಿ ಆರೋಪಿ ಆ ದಿನ ಯಾವ ರೂಟಿಗೆ ನಿಗಧಿಪಡಿಸಿತ್ತು ಎಂದು ಸಂಚಾರಿ ನಿರೀಕ್ಷಕರಿಗೆ ನಾನು ವಿಚಾರಿಸಿಲ್ಲ. ಆ ದಿನ ಸಂಚಾರಿ ನಿರೀಕ್ಷಕರು ಚಾಸಾ-7 ಇದ್ದರು.

ಈ ಹಂತದಲ್ಲಿ ಮುಂದುವರೆ ಪಾಟೀ ಸವಾಲನ್ನು ರೂ.300/- ಖರ್ಚಿನ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ

ಜೆ ಎಂ ಎಫ ಸಿ, ಅಂಕೋಲಾ.